

# ನೆನಪಿನಂಗಳದಲಿ ಜಾತ್ರೆಯ ಬೆಳುದಿಂಗಳು...

**ಹುಟ್ಟಿ ಬೆಳೆದ ಊರಿಗೂ, ಬಾಲ್ಯಕ್ಕೂ ಜಾತ್ರೆಗಳಿಗೂ ಅವಿನಾಭಾವ ಸಂಬಂಧ. ಬಾಲ್ಯಕ್ಕೆ ಸುಂದರ ನೆನಪುಗಳನ್ನು ಮೊಗೆದುಕೊಡುವ, ಊರಿನ ಜೀವಸೆಲೆಯೇ ಆಗಿರುವ ಜಾತ್ರೆಯೆಂಬ ಸಡಗರ, ಸಂಭ್ರಮವನ್ನು ತಮ್ಮೂರು ಧಾರವಾಡದ ಭಾಷೆಯಲ್ಲಿ ಹಂಚಿಕೊಂಡಿದ್ದಾರೆ ಲೇಖಕಿ**

**ಇಂದಿರಾ ಮೋಟೆಬೆನ್ನೂರ**

‘ನಮ್ಮೂರ ಜಾತ್ರೆ ಬಲು ಜೋರ ಕರಿಲಾಕ ಬಂದಾರ ತವರವರ...’

‘ಆನಂದಕಂದ’ ಕಾವ್ಯನಾಮ ಹೊಂದಿದ ನಮ್ಮ ಬೆಳಗಾವಿಯ ಪ್ರಸಿದ್ಧ ಸಾಹಿತಿ ಬೆಟಗೇರಿ ಕೃಷ್ಣಶರ್ಮರು ಬರೆದ ನಲ್ವಾಡಿನ ಸಾಲುಗಳಿವು... ಜಾತ್ರೆ ಎಂದರೆ ಸಂಭ್ರಮ, ಸಡಗರ, ಸಂತಸ... ಇನ್ನು ತವರೂರಿನ ಜಾತ್ರೆ ಅಂದ್ರ ಕೇಳಬೇಕೇ... ಖುಷಿಗೆ ಕೊನೆ ಮೊದಲಿಲ್ಲ...

ಸಣ್ಣಾಕಿದ್ದಾಗ ನಾ ಕೂಡ ಜಾತ್ರೆ ಅಂದ್ರ ಸಾಕು... ದಿಗ್ಗಂಥ ನಿದ್ದಿಗಣ್ಣಾಗ ಎದ್ದ ಕುಂತು ನಡಿ ಜಾತ್ರಿಗ ಹೋಗೂಣ ಅಂತಿದ್ದೆ...

ಧಾರವಾಡದ ಮುರುಘಾಮಠ ಜಾತ್ರೆ, ಉಳವಿಬಸಪ್ಪನ ಜಾತ್ರೆ, ಲಕ್ಷ್ಮೀನಾರಾಯಣ ಜಾತ್ರೆ, ಈ ಎಲ್ಲಾ ಜಾತ್ರೆಗೂ ಅವ್ವ ನಮ್ಮನ್ನ ಪ್ರತಿ ವರ್ಷ ದೇವರ ಮ್ಯಾಗಿನ್ ಹೂವು ತಪ್ಪಿದರೂ ತಪ್ಪಬಹುದು ಆದ್ರ ನಮ್ಮನ್ನ ಮಾತ್ರ ತಪ್ಪದಂಗ ಕರಕೊಂಡ ಹೋಗ್ತಿದ್ಲು...

ಜಾತ್ರಿ ಅಂದ್ರೆ ಹೊಸ ಅಂಗಿ, ಬಳೆ, ರಿಬ್ಬನ್, ಆಟಿಕೆ ಸಾಮಾನು, ಬೆಂಡು ಬೆತ್ತಾಸು, ಉತ್ತತ್ತಿ, ತಿಂಡಿ ತಿನಿಸು ಎಲ್ಲದರ ಆಕರ್ಷಣೆ ಇದ್ರೂ ನನಗ ಮಾತ್ರ ತೊಟ್ಟಿಲು ಚಕ್ರದಾಗ (ಪುಟ್ಟ ಜಾಯಿಂಟ್ ವೀಲ್) ಕೂಡುವ ಸಂಭ್ರಮ.

ನಾಲ್ಕು ಕಟ್ಟಿಗೆಯ ತೊಟ್ಟಿಲು ಇರುವ ಚಕ್ರ. ಒಂದು ಕ್ಷಣ ಹೆದರಿಕೆಯಿಂದ ಕಣ್ಣು ಮುಚ್ಚಿಕೊಂಡರೂ ಮರುಕ್ಷಣ ಕಣ್ಣು ತೆಗೆದು, ಶಾಲೆಯಲ್ಲಿ ನಮ್ಮ ಅಕ್ಕೋರ ಹೇಳಿದ ಕಥೆಯ ಗಲೀವರ ಯಾತ್ರೆಯ ಲಿಲಿಪುಟ್‌ಗಳಂತೆ ಪುಟ ಪುಟ ಓಡಾಡುವ ಜನರನ್ನು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆ. ಮನುಷ್ಯರು ಮಾತ್ರವಲ್ಲ ಕೆಳಗಿನ ಪ್ರತಿ ವಸ್ತುಗಳು ಆಕುಂಚನಗೊಂಡು ಒಂದು ಮಿನಿಯೇಚರ್ ಜಗತ್ತೇ ಸೃಷ್ಟಿಯಾಗುತ್ತಿತ್ತು ನಾವು ಕೆಳಗೆ ನೋಡಿದಾಗ. ಅದ್ನ ನೋಡುದ ಒಂದು ಮಜಾ...

ಜಾತ್ರ್ಯಾಗಿನ ಕೆಲವೊಂದು ಅನುಭವಗಳು